## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಧು ಜಿ ಮಾದೇಗೌಡ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 104 |
| ಉತ್ತರಿಸಬೇಕಾದ ದಿನಾಂಕ | : | 05-12-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24ನೇ ಸಾಲಿಗೆ ಯಶಸ್ವಿನಿ ಆರೋಗ್ಯ ಯೋಜನೆಯಡಿ ರಾಜ್ಯದಾದ್ಯಂತ ಸದಸ್ಯತ್ವ ನೋಂದಣಿ ಮತ್ತು ಸದಸ್ಯತ್ವ ನವೀಕರಣ ಪ್ರಕ್ರಿಯೆ ಎಂದಿನಿಂದ ಪ್ರಾರಂಭವಾಗಲಿದೆ: (ವಿವರ ನಿಡುವುದು) | 2023-24ನೇ ಸಾಲಿಗೆ ಯಶಸ್ವಿನಿ ಆರೋಗ್ಯ ಯೋಜನೆಯಡಿ ರಾಜ್ಯದಾದ್ಯಂತ ಸದಸ್ಯತ್ವ ನೋಂದಣಿಯನ್ನು ದಿನಾಂಕ:01-01-2024 ರಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.<br><br>ಈಗಿರುವ ಹಾಲಿ ಸದಸ್ಯರಿಗೆ ಚಿಕಿತ್ಸಾ ಅವಧಿಯನ್ನು ಡಿಸೆಂಬರ್ 2023 ರಿಂದ ಮಾರ್ಚ್ 2024 ರವರೆವಿಗೆ ವಿಸ್ತರಿಸಲಾಗಿದೆ. |
| ಆ) | 2023-24ನೇ ಸಾಲಿಗೆ ಎಷ್ಟು ಲಕ್ಷ ಸದಸ್ಯರನ್ನು ನೋಂದಾಯಿಸಲು ಗುರಿ ಹೊಂದಲಾಗಿದೆ: | 2023-24ನೇ ಸಾಲಿಗೆ ಯಶಸ್ವಿನಿ ಯೋಜನೆಯಡಿ 50.00 ಲಕ್ಷ ಸದಸ್ಯರ ನೋಂದಣಿ ಮಾಡಲು ಗುರಿ ನಿಗದಿ ಪಡಿಸಿಕೊಳ್ಳಲಾಗಿದೆ. |
| ಇ) | ಗ್ರಾಮೀಣ ಮತ್ತು ನಗರ ಸಹಕಾರಿಗಳು, ಪಾವತಿಸಬೇಕಿರುವ ವಾರ್ಷಿಕ ವಂತಿಕೆ ಮೊತ್ತ ಎಷ್ಟು; ಈ ಬಾರಿ ವಂತಿಕೆಯನ್ನು ಪರಿಷ್ಕರಿಸಲು ಸರ್ಕಾರ ಉದ್ದೇಶಿಸಿದೆಯೇ: (ವಿವರ ನೀಡುವುದು) | ಯಶಸ್ವಿನಿ ಯೋಜನೆಯಡಿ ವಾರ್ಷಿಕ ಸದಸ್ಯತ್ವ ಗರಿಷ್ಟ 4 ಸದಸ್ಯರ ಕುಟುಂಬ ಒಂದಕ್ಕೆ ಕ್ರಮವಾಗಿ;<br><br>ಗ್ರಾಮೀಣ ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಸದಸ್ಯರ ಕುಟುಂಬದವರಿಗೆ ರೂ.500/- ಮತ್ತು ಪ್ರತಿ ಹೆಚ್ಚುವರಿ ಅವಲಂಬಿತ ಸದಸ್ಯರಿಗೆ ತಲಾ ರೂ.100/- ಹೆಚ್ಚುವರಿ ಮೊತ್ತವನ್ನು ಪಾವತಿಸಬೇಕು.<br><br>ನಗರ ಸಹಕಾರಿಗಳಿಗೆ ರೂ.1000/- ಮತ್ತು ಪ್ರತಿ ಹೆಚ್ಚುವರಿ ಅವಲಂಬಿತ ಸದಸ್ಯರಿಗೆ ತಲಾ ರೂ.200/- ಹೆಚ್ಚುವರಿ ಮೊತ್ತವನ್ನು ಪಾವತಿಸಬೇಕು.<br><br>ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ವಂತಿಗೆಯನ್ನು ಸರ್ಕಾರ ಭರಿಸುತ್ತದೆ.<br><br>ವಂತಿಗೆ ಮೊತ್ತವನ್ನು ಪರಿಷ್ಕರಿಸುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ. |

| | | |
|---|---|---|
| ಈ) | 2023-24 ನೇ ಸಾಲಿನಲ್ಲಿ ಗ್ರಾಮೀಣ ಮತ್ತು ನಗರ ಸಹಕಾರಿಗಳಿಂದ ಸಂಗ್ರಹಿಸಲಾದ ವಾರ್ಷಿಕ ವಂತಿಕೆ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | 2023-24ನೇ ಸಾಲಿನ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿರುವುದಿಲ್ಲ. ಆದ್ದರಿಂದ ಮಾಹಿತಿ ಲಭ್ಯವಿರುವುದಿಲ್ಲ. |
| ಉ) | ಯಶಸ್ವಿನಿ ಯೋಜನೆಯಡಿ 2022-23ನೇ ಸಾಲಿನಲ್ಲಿ ನೋಂದಾಯಿತ ಸದಸ್ಯರ ಪೈಕಿ ಎಷ್ಟು ಮಂದಿ ಯಾವ ಯಾವ ತರಹದ ಖಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆಯ ಲಾಭ ಪಡೆದಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಹೆರಿಗೆ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು, ಕ್ಯಾನ್ಸರ್ ಮತ್ತು ಉದರ ಸಂಬಂಧಿಸಿದ ಖಾಯಿಲೆಗಳು ಇತ್ಯಾದಿ ವಿವಿಧ ಖಾಯಿಲೆಗಳಿಗೆ ವೈದ್ಯಕೀಯ ಚಿಕಿತ್ಸೆಯ ಲಾಭ ಪಡೆದಿರುತ್ತಾರೆ.<br><br>ವೈದ್ಯಕೀಯ ಚಿಕಿತ್ಸೆಯ ಲಾಭ ಪಡೆದಿರುವ ಸದಸ್ಯರ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಊ) | ಯಶಸ್ವಿನಿ ಯೋಜನೆಯಡಿ 2022-23ನೇ ಸಾಲಿನಲ್ಲಿ ಭರಿಸಲಾಗಿರುವ ಮತ್ತು ಭರಿಸಲು ಬಾಕಿ ಇರುವ ವೆಚ್ಚದ ಮೊತ್ತ ಎಷ್ಟು; (ಸಂಪೂರ್ಣ ವಿವರ ನೀಡುವುದು) | 2022-23ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿ ಫಲಾನುಭವಿಗಳಿಗೆ ಚಿಕಿತ್ಸೆಯನ್ನು ದಿನಾಂಕ:01-01-2023 ರಿಂದ ಪ್ರಾರಂಭಿಸಲಾಗಿದ್ದು, ಇಲ್ಲಿಯವರೆವಿಗೆ ಸುಮಾರು 45 ಸಾವಿರ ಫಲಾನುಭವಿಗಳು ರೂ.74.00 ಕೋಟಿ ಮೊತ್ತದ ಚಿಕಿತ್ಸೆ/ಶಸ್ತ್ರಚಿಕಿತ್ಸೆಗಳನ್ನು ರಾಜ್ಯಾದ್ಯಂತ ಇರುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಪಡೆದಿರುತ್ತಾರೆ.<br><br>ಆಗಸ್ಟ್-2023 ರವರೆಗೆ 23,794 ಪ್ರಕರಣಗಳ ಕ್ಲೇಮ್ ಬಿಲ್ಲುಗಳನ್ನು 8 ಕಂತುಗಳಲ್ಲಿ ರೂ.39.08ಕೋಟಿಯನ್ನು ಸಂಬಂಧಿಸಿದ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಈಗಾಗಲೇ ಪಾವತಿಸಲಾಗಿದೆ. |

**ಸಂಖ್ಯೆ: ಸಿಒ 242 ಸಿಎಲ್‌ಎಸ್ 2023**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಅನುಬಂಧ - 1

## Yeshasvini Patient District Wise From 1st Jan to 7th Nov 2023

| S.No | Patient District | Count | Amount |
|---|---|---|---|
| 1 | BAGALKOT | 2396 | 2,88,99,450 |
| 2 | BANGALORE RURAL | 770 | 1,10,68,300 |
| 3 | BANGALORE ZONE-1 | 1028 | 2,45,15,948 |
| 4 | BANGALORE ZONE-2 | 304 | 48,00,498 |
| 5 | BANGALORE ZONE-3 | 254 | 38,34,300 |
| 6 | BANGALORE ZONE-4 | 469 | 69,48,674 |
| 7 | BELAGAVI | 2569 | 4,00,73,488 |
| 8 | BELLARY | 259 | 53,59,545 |
| 9 | BIDAR | 1238 | 1,72,26,090 |
| 10 | CHAMARAJNAGAR | 578 | 1,10,92,934 |
| 11 | CHIKKABALLAPUR | 640 | 88,08,149 |
| 12 | CHIKKMAGALUR | 1264 | 2,41,02,309 |
| 13 | CHITRADURGA | 1160 | 2,44,98,148 |
| 14 | DAKSHINA KANNADA | 1950 | 3,58,23,391 |
| 15 | Davanagere | 3703 | 5,26,83,472 |
| 16 | DHARWAD | 1329 | 1,36,88,800 |
| 17 | GADAG | 1099 | 1,25,44,275 |
| 18 | HASSAN | 2332 | 6,54,22,946 |
| 19 | HAVERI | 1718 | 2,28,56,975 |
| 20 | KALABURAGI | 485 | 1,10,38,645 |
| 21 | KODAGU | 500 | 1,13,38,349 |
| 22 | KOLAR | 377 | 61,53,400 |
| 23 | KOPPAL | 816 | 1,00,18,993 |
| 24 | MANDYA | 3598 | 6,00,94,697 |
| 25 | MYSORE | 2682 | 4,90,50,707 |
| 26 | RAICHUR | 643 | 99,66,500 |
| 27 | RAMANAGARA | 1310 | 2,00,46,266 |
| 28 | Shivamogga | 2681 | 4,52,58,721 |
| 29 | TUMKUR | 2088 | 3,76,03,225 |
| 30 | UDUPI | 1433 | 1,75,86,869 |
| 31 | UTTARA KANNADA | 992 | 1,78,61,851 |
| 32 | VIJAYANAGARA | 1187 | 1,63,15,124 |
| 33 | VIJAYAPURA | 1068 | 1,48,52,449 |
| 34 | YADGIR | 151 | 29,85,950 |
| | **Grand Total** | **45071** | **74,44,19,436** |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್
ಬೆಂಗಳೂರು